



ಫ್ಯಾಷನ್

# ಕೈ ಬಳೆ ನಾದಕೆ..

ಸಾಮಾನ್ಯ ಗಾಜಿನ ಬಳೆಯಿಂದ ಹಿಡಿದು ದುಬಾರಿ ಚಿನ್ನದ ಬಳೆಯವರೆಗೂ ಮಹಿಳೆಯ ಕೈ ಅಲಂಕರಿಸುತ್ತವೆ. ಈ ಬಳೆಯಿಲ್ಲದೇ ಅಲಂಕಾರ ಪರಿಪೂರ್ಣವಾಗಲಾರದು.

■ ಎಸ್ಸೆಚ್

ಬಳೆ ಎಂದ ಕೂಡಲೇ 'ಮೆರೆ ಹಾಥೋ ಮೇ ನವ್ ನವ್ ಚೂಡಿಯಾಂ ಹೈ..' ಹಾಡಿಗೆ ಕೈತುಂಬ ತೊಟ್ಟಿರುವ ಗಾಜಿನ ಬಳೆಗಳನ್ನು ಕುಲುಕುತ್ತ ನರ್ತಿಸಿದ ನಟಿ ಶ್ರೀದೇವಿ ಯಾರಿಗೆ ನೆನಪಾಗುವುದಿಲ್ಲ ಹೇಳಿ? ಹಾಡಿನ ಮಾಧುರ್ಯದ ಜೊತೆ ಘಲ್ಲೆನ್ನುವ ಬಳೆಗಳ ಸದ್ದು ಮನವನ್ನು ಸವಿ ನೆನಪಿಗೆ ಜಾರಿಸುತ್ತದೆ.

ಚಿಕ್ಕಂದಿನಲ್ಲಿ ಜಾತ್ರೆ, ತೇರು ಎಂದು ಹೋದ ಕಡೆಯೆಲ್ಲ 'ಗಾಜಿನ ಬಳೆಗಳು ಬೇಡ, ಒಡೆದು ಹೋಗುತ್ತವೆ. ಕರ್ಪೂರದ ಬಳೆಗಳು ಸಾಕು' ಎಂದರೂ ಅಮ್ಮನನ್ನು ಕಾಡಿಸಿ ಕೈತುಂಬ ಇಡಿಸಿಕೊಂಡ ಬಂಗಾರದ ಚುಕ್ಕಿಗಳ ಕೆಂಪು ಗಾಜಿನ ಬಳೆಗಳು.. ಹರೆಯದಲ್ಲಿ ಮನೆ ಬಾಗಿಲಿಗೆ ಮಲ್ಹಾರ ಹೊತ್ತ ಬಳೆಗಾರ ಬಂದಾಗಲೆಲ್ಲ ಕೇಳದಿದ್ದರೂ ತಾನಾಗೇ ಅಪ್ಪ ಕೊಡಿಸಿದ ಹಸಿರು, ಕೆಂಪು, ನೀಲ, ಹಳದಿ ವರ್ಣಗಳ ಕಾಮನಬಿಲ್ಲು ಸೃಷ್ಟಿಸುವ ಬಳೆಗಳು.. ಮುಂಗೈನಿಂದ ಹಿಂದೆ ಸರಿಸಿದಾಗಲೆಲ್ಲ ಹೊರಡಿಸುವ ಕಣಕಣ ಸದ್ದಿನೊಂದಿಗೆ ಕಣ್ಣುಗಳಲ್ಲಿ ತೂಗುವ ಕನಸು.. ಮದುವೆ ಮಂಟಪದಲ್ಲಿ ಕರಗಳ ತುಂಬ ಹಸಿರು, ಕೆಂಪಿನ ರೇಷ್ಮೆ ಬಳೆಗಳ ಜೊತೆ ಸಾಥ್ ನೀಡಿದ ಚಿನ್ನದ ಬಳೆಗಳು ಹಸ್ತದ ಮದರಂಗಿಯ ಅಂದದ ಜೊತೆ ಸ್ಪರ್ಧೆ ನಡೆಸಿದರೆ, ಕಣ್ಣಂಚಿನಲ್ಲಿ ಮಡಗಟ್ಟಿದ ನೀರು ತನ್ನವನ ಒರಟು ಕೈಗಳ ಸ್ಪರ್ಶದಿಂದ ಒಡೆದ ಬಳೆಯ ಚೂರಿನಿಂದಾದ ಗಾಯದ ಉರಿಗೋ ಅಥವಾ ತವರನ್ನು ಬಿಟ್ಟು ತೆರಳುವ ನೋವಿಗೋ ಗೊತ್ತಾಗದಂತಹ ಅಯೋಮಯ.. ಸೀಮಂತ ಮಾಡುವಾಗ ಅಮ್ಮ ತೊಡಿಸಿದ ಹಸಿರು ಗಾಜಿನ ಬಳೆಗಳನ್ನು ಕರವಸ್ತ್ರದಲ್ಲಿ ಕಾಪಿಟ್ಟು ರಂಗು ಮಸುಕಾದರೂ ಮತ್ತೆ ಮತ್ತೆ ನೋಡುವಾಗ ಯಾವ ಚಿನ್ನದ ಬಳೆಗಳಿಗಿಂತ ಮಿಗಿಲಾದ ಪುಳಕ..

ಭಾರತೀಯ ಹೆಣ್ಣಿನ ಬದುಕಿನ ಚಕ್ರ ಸುತ್ತುವುದೇ ಈ ಬಳೆಗಳ ಸುತ್ತ. ಹುಟ್ಟಿದ ಶಿಶುವಿನ ಮೆತ್ತನೆಯ ಕೈಗಳಿಗೆ ಕರಿಮಣಿ ಪೋಣಿಸಿದ ದಾರ, ಹವಳ ಸುತ್ತಿದ ಚಿನ್ನದ ಸರಿಗೆ, ಬೆಳ್ಳಿಯ ಕಡಗದಿಂದ ಆರಂಭವಾಗುವ ಈ ಕಂಕಣದ ಕಿಣಿಕಿಣಿ ಸದ್ದು ಬದುಕಿನ ಅಂತ್ಯದವರೆಗೂ ಹಾಡಾಗಿ ಮುಂದುವರಿಯುತ್ತದೆ.

ಭಾರತೀಯ ಸಂಸ್ಕೃತಿಯಲ್ಲಿ ಗತಕಾಲದಿಂದ ಹಾಸುಹೊಕ್ಕಾಗಿರುವ ಈ ಬಳೆಗಳು ಹೆಣ್ಣು ಮಕ್ಕಳ, ಅದರಲ್ಲೂ ಮದುವೆಯಾದ ಯುವತಿಯರ ಸಂಕೇತವಾಗಿದ್ದವು. ಪುರಾಣಗಳಲ್ಲೂ ಈ ಬಳೆಗಳ ಪ್ರಸ್ತಾಪವಿದೆ. ಮೊಹೆಂಜೊದಾರೊ ನಾಗರಿಕತೆಗೆ ಸೇರಿದ ನರ್ತಕಿಯ ಕಂಚಿನ ಪುತ್ಥಳಿಯ ಕೈಯಲ್ಲೂ ಬಳೆಗಳಿವೆ ಅಂದರೆ ಇದರ ಪ್ರಾಚೀನತೆಯ ಅರಿವಾಗದೇ ಇರದು. ಮೌರ್ಯರ ಕಾಲದ ತಾಮ್ರದ ಬಳೆಗಳು ಕೂಡಾ ಸಿಕ್ಕಿದ್ದು, ಆಗ ಪುರುಷರೂ ಕೈಗಳಿಗೆ ಬಳೆ ಧರಿಸುವ ಪದ್ಧತಿಯಿತ್ತು. ಪ್ರಾಚೀನ ದೇವತಾ ಮೂರ್ತಿಗಳ ಕೈಗಳಲ್ಲೂ ಈ ಬಳೆಗಳಿದ್ದು, ಬಹಳ ಹಿಂದಿನಿಂದಲೇ ತಾಮ್ರ, ಕಂಚು, ಹಿತ್ತಾಳೆ, ಬೆಳ್ಳಿ, ಚಿನ್ನದಂತಹ ಲೋಹಗಳಲ್ಲದೇ ಶಂಖ, ದಂತ, ಅರಗು, ಗಾಜು, ಮರ ಮೊದಲಾದ ವೈವಿಧ್ಯಮಯ ವಸ್ತುಗಳಿಂದ ಈ ಬಳೆಗಳನ್ನು ಮಾಡುತ್ತಿದ್ದ ಕರಕುಶಲಕರ್ಮಿಗಳ ಕೌಶಲ್ಯ ಶ್ಲಾಘಿಸುವಂಥದ್ದೇ. ಸರಳವಾದ ಲೋಹದ ಬಳೆಯಿಂದ ಹಿಡಿದು ಸೂಕ್ಷ್ಮ ಕುಸುರಿ ಕೆತ್ತನೆಗಳನ್ನು ಮಾಡಿದ ಅಮೂಲ್ಯ ಹರಳುಗಳನ್ನು ಕೂರಿಸಿದ ಬಳೆಗಳವರೆಗೂ ವೈವಿಧ್ಯತೆಯನ್ನು ಕಾಣಬಹುದು.

ಭಾರತದಲ್ಲಂತೂ ವೈವಿಧ್ಯಮಯ ಸಂಪ್ರದಾಯ, ಸಂಸ್ಕೃತಿಯಿದ್ದಂತೆ, ಈ ಬಳೆಗಳನ್ನು ಧರಿಸುವುದರಲ್ಲಿಯೂ ವಿಭಿನ್ನತೆಯಿದೆ. ಬಳಸುವ ವಸ್ತುಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿವೆ. ಉತ್ತರ ಭಾರತದಲ್ಲಿ ವಿವಾಹಿತ ಮಹಿಳೆಯರು ಸಾಂಪ್ರದಾಯಕ ಗಾಜಿನ ಬಳೆಗಳ ಜೊತೆ ಶಂಖ, ದಂತ, ಅರಗಿನ ಬಳೆಗಳನ್ನು ಧರಿಸಿದರೆ, ದಕ್ಷಿಣದ ಬಹುತೇಕ ರಾಜ್ಯಗಳಲ್ಲಿ ಗಾಜಿನ ಬಳೆ ಧರಿಸುವ ಸಂಪ್ರದಾಯವಿದೆ.

